**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 74/2019**

ದಿನಾಂಕಃ 24.08.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 1 ಪ್ರಾಸಾ - 1

| | | |
|---|---|---|
| ಹೆಸರು | ಃ | ಪ್ರಕಾಶ್ ವಿ.ಪಿ. |
| ತಂದೆಯ/ಗಂಡನ ಹೆಸರು | ಃ | ಲೇಟ್ ಪುಟ್ಟಮಲ್ಲಯ್ಯ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಉಡುಕುಂಟೆ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 17.02.2019 ರಂದು ಸಂಜೆ 5.30 ರಿಂದ 6 ಗಂಟೆ ಸಮಯದಲ್ಲಿ ನಾನು ನನ್ನ ಮನೆಯ ಹತ್ತಿರ ಇರುವಾಗ, ನಾರಾಯಣಪುರ ವಾಸಿಯೊಬ್ಬರು ನನಗೆ ದೂರವಾಣಿ ಮುಖೇನ ನಮ್ಮ ಮನೆಗೆ ಹತ್ತಿರವಾಗಿರುವ ಮಹಿಳಾ ಸೌಹಾರ್ದ ಬ್ಯಾಂಕ್‌ವೊಂದರ ಬಳಿ ಸುಟ್ಟ ಕರಕಲು ಶವವೊಂದು ಇರುವುದಾಗಿ ತಿಳಿಸಿದರು ಮತ್ತು ಪೊಲೀಸರಿಗೆ ಮಾಹಿತಿ ಕೊಡಲು ಕೋರಿಕೊಂಡರು.

2. ಸದರಿ ದೂರವಾಣಿ ಮಾಹಿತಿ ಅನ್ವಯ ನಾನು ಸೌಹಾರ್ದ ಬ್ಯಾಂಕ್ ಸ್ಥಳದ ಹತ್ತಿರ ಹೋದೆನು. ಸದರಿ ಸ್ಥಳದಲ್ಲಿ ತಲೆ ಕೆಳಗೆ ಮಾಡಿಕೊಂಡಿರುವ ಮಹಿಳೆಯ ಸುಟ್ಟ ಕರಕಲು ಶವವನ್ನು

ಗಮನಿಸಿರುತ್ತೇನೆ. ಪರಿಣಾಮ ನನ್ನ ಮೊಬೈಲ್‌ನಿಂದ ಕುದೂರು ಪೊಲೀಸ್ ಠಾಣೆಗೆ ಮಾಹಿತಿ ನೀಡಿರುತ್ತೇನೆ.

3. ನಾನು ಫೋನ್ ಮಾಡಿದ 15 ರಿಂದ 20 ನಿಮಿಷ ಬಳಿಕ ಕುದೂರು ಪೊಲೀಸರು ಸದರಿ ಸ್ಥಳಕ್ಕೆ ಬಂದಿರುತ್ತಾರೆ. ಅವರು ಸ್ಥಳಕ್ಕೆ ಬಂದಾಗ ಅಂದಾಜು ಸಮಯ ಸಂಜೆ 6 ಗಂಟೆ ಆಗಿತ್ತು. ಪೊಲೀಸರಿಗೆ ನಾನು ಶವವಿದ್ದ ಜಾಗವನ್ನು ಮತ್ತು ಶವವನ್ನು ತೋರಿಸಿದ್ದೇನೆ.

4. ನಂತರ ಪೊಲೀಸರು ನನ್ನಿಂದ ಪ್ರಥಮ ಮಾಹಿತಿಯನ್ನು ಪಡೆದಿರುತ್ತಾರೆ. ಈಗ ನನಗೆ ತೋರಿಸಿದ ದಾಖಲೆಯೇ ನನ್ನಿಂದ ಪಡೆದ ಪ್ರಥಮ ಮಾಹಿತಿಯಾಗಿದೆ. ಅದನ್ನು ಈಗ ನಿಶಾನೆ ಪಿ 1 ಎಂದು, ಅದರಲ್ಲಿರುವ ನನ್ನ ರುಜುವನ್ನು ನಿಶಾನೆ ಪಿ 1(ಎ) ಎಂದು ಗುರುತು ಮಾಡಲಾಯಿತು.

5. ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ಶವದ ಮೈಮೇಲಿದ್ದ ವಸ್ತುಗಳನ್ನು ಅಮಾನತು ಕ್ರಮಕ್ಕೆ ಒಳಪಡಿಸಿರುತ್ತಾರೆ. ಈ ಬಗ್ಗೆ ವಿವರವಾದ ಮಹಜರ್ ಬರವಣಿಗೆ ಮಾಡಿದ್ದು, ನಾನು ಮಹಜರ್ ದಾಖಲೆಗೆ ರುಜು ಮಾಡಿದ್ದೇನೆ. ಸದರಿ ದಾಖಲೆಯು ಈಗ ನನಗೆ ತೋರಿಸಿದ ದಾಖಲೆಯಾಗಿದೆ. ಅದನ್ನು ನಿಶಾನೆ ಪಿ 2 ಎಂದು ಮತ್ತು ಅದರಲ್ಲಿರುವ ನನ್ನ ರುಜುವನ್ನು ನಿಶಾನೆ ಪಿ 2(ಎ) ಎಂದು ಗುರುತು ಮಾಡಲಾಯಿತು.

6. ಶವದ ಮೈಮೇಲೆ ಅರೆಬರೆ ಸುಟ್ಟ ಬಟ್ಟೆಗಳು, ರಿಂಗು ಮತ್ತು ಇತರ ವಸ್ತುಗಳು ಇದ್ದವು. ಸದರಿ ಶವ ಯಾರ ಶವ ಎಂಬುವುದಾಗಿ ಆ ಕಾಲಕ್ಕೆ ನನಗೆ ತಿಳಿಯಲಿಲ್ಲ.

7. ಶವವಿದ್ದ ಸ್ಥಳದಲ್ಲಿ ಹೊಂಗೆ ಮರವೊಂದು ಇತ್ತು ಮತ್ತು ಸ್ಥಳದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹುಲ್ಲು ಬೆಳೆದಿತ್ತು. ಪರಿಣಾಮ ಕೆಳಗೆ ಬಿದ್ದ ವಸ್ತುಗಳನ್ನು ದೂರದಿಂದ ನೋಡಿದಾಗ ಕಾಣುತ್ತಾ ಇರಲಿಲ್ಲ.

8. ಈಗ ನನಗೆ ತೋರಿಸಿದ ಫೋಟೋವು ಶವವಿದ್ದ ಸ್ಥಳದ ಫೋಟೋ ಆಗಿರುತ್ತದೆ. ನನಗೆ ತೋರಿಸಿದ ಎರಡು ಫೋಟೋಗಳನ್ನು ಈಗ ನಿಶಾನೆ ಪಿ 3 ಮತ್ತು 4 ಎಂದು ಗುರುತು ಮಾಡಲಾಯಿತು.

9. ಶವವಿದ್ದ ಸ್ಥಳದಲ್ಲಿ ಖಾಲಿ ಶೀಸೆಗಳು, ಇತರ 5-6 ಪದಾರ್ಥಗಳು ಇದ್ದವು. ಅವುಗಳನ್ನು ಸಹ ಪೊಲೀಸರು ತಮ್ಮ ವಶಕ್ಕೆ ಪಡೆದರು. ಈ ಬಗ್ಗೆ ಸಹ ಪ್ರತ್ಯೇಕ ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದರಿ ಪ್ರತ್ಯೇಕ ಮಹಜರ್ ಈಗ ನನಗೆ ತೋರಿಸಿದ ದಾಖಲೆಯಾಗಿದೆ. ಅದನ್ನು ನಿಶಾನೆ ಪಿ 5 ಎಂದು ಮತ್ತು ಅದರಲ್ಲಿರುವ ನನ್ನ ರುಜುವನ್ನು ನಿಶಾನೆ ಪಿ 5(ಎ) ಗುರುತು ಮಾಡಲಾಯಿತು. ನಿಶಾನೆ ಪಿ 5 ರಂತೆ ಒಟ್ಟಾರೆ 8-9 ವಸ್ತುಗಳನ್ನು ಪೊಲೀಸರು ತಮ್ಮ ವಶಕ್ಕೆ ಪಡೆದಿರಬಹುದು. ಅವುಗಳನ್ನು ನೋಡಿದರೆ ಗುರುತಿಸಬಲ್ಲೆನು.

10. ಸದರಿ ಸ್ಥಳದಿಂದ ಶವವನ್ನು ಪೊಲೀಸರು ರಾಜರಾಜೇಶ್ವರಿ ಆಸ್ಪತ್ರೆಗೆ ಸ್ಥಳಾಂತರಿಸಿರುತ್ತಾರೆ. ನಂತರದ 6 ತಿಂಗಳ ಬಳಿಕ ನಾನು ಗಮನಿಸಿದ ಶವವು ಮಂಗಳೂರು ಪ್ರಾಂತ್ಯದ ಮಹಿಳೆಯ ಶವವೆಂದು, ಸದರಿ ಮಹಿಳೆಯ ತಂದೆತಾಯಿ ಸಕಲೇಶಪುರದವರು ಎಂದು ಗೊತ್ತಾಯಿತು.

11. ಈಗ ನನಗೆ ತೋರಿಸಿದ ಮತ್ತು ಮುದ್ರೆಯಲ್ಲಿ ಇರಿಸಲಾಗಿರುವ 9 ವಸ್ತುಗಳ ಮೇಲಿನ ಬಟ್ಟೆ ಕವಚದಲ್ಲಿ ನನ್ನ ರುಜು ಇರುವ ಚೀಟಿಗಳನ್ನು ಅಂಟಿಸಲಾಗಿದ್ದು, ಸದರಿ ರುಜುಗಳನ್ನು ನಾನು ಶವವಿದ್ದ ಸ್ಥಳದಲ್ಲೇ ಮಾಡಿರುತ್ತೇನೆ. ಮುದ್ರೆಯಲ್ಲಿ ಇರಿಸಿರುವ ವಸ್ತುಗಳು ನಾನು ಈಗಾಗಲೇ ನುಡಿದಂತೆ ಸ್ಥಳದಲ್ಲಿ ಪೊಲೀಸರು ತಮ್ಮ ವಶಕ್ಕೆ ಪಡೆದ ವಸ್ತುಗಳಾಗಿವೆ. (ಸಾಕ್ಷಿಯು ಗುರುತು ಹಚ್ಚಿದ ಹಾಗು ಮುದ್ರೆಯಲ್ಲಿರುವ ವಸ್ತುಗಳನ್ನು ಮುದ್ರೆಯಿಂದ ತೆಗೆಯಲು ಅನುಮತಿಸಲಾಯಿತು.)

12. ಈಗ ನನಗೆ ತೋರಿಸಿದ ದಿನಪತ್ರಿಕೆಯ ತುಣುಕು ಸ್ಥಳದಲ್ಲಿ ದೊರೆತ ತುಣುಕಾಗಿರುತ್ತದೆ. ಅದನ್ನು ಈಗ ಮುದ್ದೆಮಾಲು 1 ಎಂದು ಗುರುತು ಮಾಡಲಾಯಿತು.

13. ಈಗ ನನಗೆ ತೋರಿಸಿದ ಬಟ್ಟೆಯ ಚೂರು ಸ್ಥಳದಲ್ಲಿ ದೊರೆತ ಬಟ್ಟೆ ಚೂರಾಗಿರುತ್ತದೆ. ಅದನ್ನು ಈಗ ಮುದ್ದೆಮಾಲು 2 ಎಂದು ಗುರುತು ಮಾಡಲಾಯಿತು.

14. ಈಗ ನನಗೆ ತೋರಿಸಿದ ಪ್ಲಾಸ್ಟಿಕ್ ಶೀಸೆ ಸ್ಥಳದಲ್ಲಿ ದೊರೆತ ಶೀಸೆಯಾಗಿರುತ್ತದೆ. ಅದನ್ನು ಈಗ ಮುದ್ದೆಮಾಲು 3 ಎಂದು ಗುರುತು ಮಾಡಲಾಯಿತು.

15. ಈಗ ನನಗೆ ತೋರಿಸಿದ ಕೂದಲುಗಳು ಸ್ಥಳದಲ್ಲಿ ದೊರೆತ ಕೂದಲಾಗಿರುತ್ತದೆ. ಅದನ್ನು ಈಗ ಮುದ್ದೆಮಾಲು 4 ಎಂದು ಗುರುತು ಮಾಡಲಾಯಿತು.

16. ಈಗ ನನಗೆ ತೋರಿಸಿದ ತೊಯ್ದು ಮಣ್ಣು ಸ್ಥಳದಲ್ಲಿ ದೊರೆತ ಮಣ್ಣಾಗಿರುತ್ತದೆ. ಅದನ್ನು ಈಗ ಮುದ್ದೆಮಾಲು 5 ಎಂದು ಗುರುತು ಮಾಡಲಾಯಿತು.

17. ಈಗ ನನಗೆ ತೋರಿಸಿದ ಸಾದಾ ಮಣ್ಣು ಸ್ಥಳದಲ್ಲಿ ದೊರೆತ ಮಣ್ಣಾಗಿರುತ್ತದೆ. ಅದನ್ನು ಈಗ ಮುದ್ದೆಮಾಲು 6 ಎಂದು ಗುರುತು ಮಾಡಲಾಯಿತು.

18. ಈಗ ನನಗೆ ತೋರಿಸಿದ ಮೆಟಲ್ ರಿಂಗ್ ಸ್ಥಳದಲ್ಲಿ ದೊರೆತ ರಿಂಗಾಗಿರುತ್ತದೆ. ಅದನ್ನು ಈಗ ಮುದ್ದೆಮಾಲು 7 ಎಂದು ಗುರುತು ಮಾಡಲಾಯಿತು.

19. ಈಗ ನನಗೆ ತೋರಿಸಿದ ಏರ್‌ಪಿನ್ ಸ್ಥಳದಲ್ಲಿ ದೊರೆತ ಏರ್‌ಪಿನ್‌ಗಿರುತ್ತದೆ. ಅದನ್ನು ಈಗ ಮುದ್ದೆಮಾಲು 8 ಎಂದು ಗುರುತು ಮಾಡಲಾಯಿತು.

20. ಈಗ ನನಗೆ ತೋರಿಸಿದ ಚರ್ಮದ ಭಾಗ ಸ್ಥಳದಲ್ಲಿ ದೊರೆತ ಚರ್ಮದ ಭಾಗವಾಗಿರುತ್ತದೆ. ಅದನ್ನು ಈಗ ಮುದ್ದೆಮಾಲು 9 ಎಂದು ಗುರುತು ಮಾಡಲಾಯಿತು.

21. ಸದರಿ ಮುದ್ದೆಮಾಲು 1 ರಿಂದ 9 ನ್ನು ಇರಿಸಲಾಗಿದ್ದ ಬಟ್ಟೆ ಮುದ್ರಾ ಕವಚದಲ್ಲಿರುವ ನನ್ನ ರುಜುಗಳನ್ನು ಮುದ್ದೆಮಾಲು 1(ಎ) ರಿಂದ ಮುದ್ದೆಮಾಲು 9(ಎ) ಎಂದು ಗುರುತು ಮಾಡಲಾಯಿತು.

**<u>ಪಾಟೀ ಸವಾಲುಃ</u> ಶ್ರೀ.ಆರ್.ಎಂ.ಎಸ್. ವಕೀಲರಿಂದ – ಆರೋಪಿ ಪರವಾಗಿಃ-**

22. ನಾನು ವ್ಯವಸಾಯ ಮಾಡುತ್ತೇನೆ. ನನಗೆ ದೂರವಾಣಿ ಮುಖೇನ ಮಾಹಿತಿ ನೀಡಿದ ವ್ಯಕ್ತಿ ಪರಿಚಯವಿರುತ್ತಾರೆ. ಅವರ ಹೆಸರು ನೆನಪಿಲ್ಲ. ಶವವಿತ್ತು ಎಂದು ಹೇಳಲಾದ ಸ್ಥಳದ ಸುತ್ತಮುತ್ತ ನನಗೆ ಸೇರಿದ ಯಾವುದೇ ಸ್ವಂತ ಸ್ಥಿರಸ್ಥಿಗಳು ಇಲ್ಲ. ದೂರವಾಣಿ ಮಾಹಿತಿ ಸ್ವೀಕರಿಸಿದ 10 ನಿಮಿಷದಲ್ಲಿ ನಾನು ಶವವಿದ್ದ ಸ್ಥಳಕ್ಕೆ ಹೋಗಿರುತ್ತೇನೆ. ಕಾರಣ ಶವವಿದ್ದ ಸ್ಥಳವು ನನ್ನ ಮನೆಯಿಂದ 2 ಕಿ.ಮೀ. ದೂರದಲ್ಲಿ ಇರುತ್ತದೆ.

23. ಶವವಿದ್ದ ಸ್ಥಳದಲ್ಲಿ ನಾನು ಹೋದಾಗ ಸೂಚಿಸಿದಂತೆ 10-20 ಜನ ಇರಲಿಲ್ಲ, ಆದರೆ ಹಸು ಮೇಯಿಸುತ್ತಾ ಒಬ್ಬ ಹುಡುಗಿ ಸ್ಥಳದಲ್ಲಿ ಇದ್ದಳು. ನನಗೆ ದೂರವಾಣಿ ಮುಖೇನ ತಿಳಿಸಿದ ವ್ಯಕ್ತಿ ಸಹ ಸ್ಥಳದಲ್ಲಿ ಇರಲಿಲ್ಲ.

24. ಸ್ಥಳಕ್ಕೆ ಪೊಲೀಸರು ಬಂದಾಗ ಸ್ಥಳದಲ್ಲಿ ನಾನು ಒಬ್ಬನೇ ಇದ್ದೆನು. ನಾನು ಪ್ರಥಮ ಮಾಹಿತಿಯನ್ನು ಶವವಿದ್ದ ಸ್ಥಳದಲ್ಲೇ ಬರೆದು ನೀಡಿರುತ್ತೇನೆ. ನಾನು ಮುಖ್ಯವಿಚಾರಣೆಯಲ್ಲಿ ಉಲ್ಲೇಖಿಸಿದ ಮಹಜರ್ ಕ್ರಮಗಳನ್ನು ಮತ್ತು ನಡವಳಿಕೆಗಳನ್ನು ಸಂಜೆ 6.30 ರಿಂದ ಪ್ರಾರಂಭಿಸಿ ರಾತ್ರಿ 8.30 ರವರೆಗೆ ಜರುಗಿಸಿರುತ್ತಾರೆ. ಪ್ರಶ್ನಿಸಿದಂತೆ ನನಗೆ ಯಾವುದೇ ಲಿಖಿತ ತಿಳುವಳಿಕೆಯನ್ನು ಮಹಜರ್ ಕಾಲಕ್ಕೆ ನೀಡಿರಲಿಲ್ಲ.

25. ನಾನು ಗುರುತು ಹಚ್ಚಿದ ಮುದ್ದೆಮಾಲು 1 ರಿಂದ 9 ರ ವಸ್ತುಗಳು ಶವವಿದ್ದ ಸ್ಥಳದಲ್ಲಿ ಇರಲಿಲ್ಲ ಮತ್ತು ಅವುಗಳನ್ನು ಸದರಿ ಸ್ಥಳದಿಂದ ಪೊಲೀಸರು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಮಹಜರ್ ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ರುಜು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.